
ಕಾರ್ಯಾಗಾರ
ದೇವರಕಾಡು: ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ
ಸ್ಥಳೀಯ ಜನರ ಸಹಭಾಗಿತ್ವ
ಜುಲೈ ೧೮ ಮತ್ತು ೧೯
ಹೋಟೆಲ್ ಮಧುವನ, ಶಿರಸಿ, ಉತ್ತರಕನ್ನಡ ಜಿಲ್ಲೆ
ದೂ. ಸಂ.- 080 22933099 / 8277090374
Funded by The Rufford Foundation
ವಿನ್ಯಾಸ - ಅರುಣ್ ಡಿ.ಟಿ
INDIAN INSTITUTE OF SCIENCE

ದೇವರಕಾಡು ನಮ್ಮ ಗ್ರಾಮೀಣ ಬದುಕಿನ ಒಂದು ಭಾಗ. ಪ್ರಾಚೀನ ಕಾಲದಿಂದಲೂ ಗ್ರಾಮೀಣ ಜನರು ದೇವರಕಾಡುಗಳನ್ನ ಪ್ರೀತಿ ಮತ್ತು ಆಧರಗಳಿಂದ ರಕ್ಷಿಸಿಕೊಂಡು ಬಂದಿದ್ದಾರೆ. ಇಂದು ಇವು ಸಮುದಾಯ ಆಧಾರಿತ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಗೆ ಉತ್ತಮ ನಿದರ್ಶನಗಳಾಗಿವೆ.



ಉತ್ತರಕನ್ನಡ ಜಿಲ್ಲೆಯ ದೇವರಕಾಡುಗಳು ವಿವಿಧ ರೀತಿಯ ಜೀವಪರಿಸರ ವ್ಯವಸ್ಥೆಯಲ್ಲಿ ಕಾಣಸಿಗುತ್ತವೆ. ಇವುಗಳನ್ನ ಅರಣ್ಯ, ಮ್ಯಾಂಗ್ರೂವ್ ಕಾಡು, ಕೃಷಿಭೂಮಿ ಮತ್ತು ಜನವಸತಿ ಪ್ರದೇಶಗಳ ಮಧ್ಯದಲ್ಲಿ ನಾವು ಕಾಣಬಹುದು. ಜೀವಪರಿಸರ ವ್ಯವಸ್ಥೆಯ ಸಂಕೀರ್ಣ ಕ್ರಿಯೆಗಳನ್ನ ನಿಯಂತ್ರಿಸುವಲ್ಲಿ ಇವುಗಳ ಪಾತ್ರ ತುಂಬಾ ಮಹತ್ವದ್ದು, ದೇವರಕಾಡುಗಳ ಶ್ರೀಮಂತ ಸಸ್ಯ, ಪ್ರಾಣಿ ಸಂಪತ್ತು ಮತ್ತು ಸಾಮಾಜಿಕ, ಆರ್ಥಿಕ ಪ್ರಾಮುಖ್ಯತೆಗಳ ಬಗ್ಗೆ ಬಹಳಷ್ಟು ವೈಜ್ಞಾನಿಕ ಅಧ್ಯಯನಗಳು ಈಗಾಗಲೇ ಬೆಳಕುಚಲ್ಲಿವೆ. ಆದಕಾರಣ ಸಾಮಾಜಿಕ ಮತ್ತು ಜೈವಿಕ ದೃಷ್ಟಿಯಿಂದ ಇವು ಬಹಳ ಮಹತ್ವದ್ದಾಗಿವೆ. ಭೂಮಿಯನ್ನು ಉಪಯೋಗಿಸುವ ಕ್ರಮದಲ್ಲಿ ಮತ್ತು ಸಮಾಜದ ಯೋಚನಾಕ್ರಮದಲ್ಲಾಗುತ್ತಿರುವ ಶೀಘ್ರಗತಿಯ ಬದಲಾವಣೆಗಳಿಂದಾಗಿ ಈ



ಪಾರಂಪರಿಕ ನಿಸರ್ಗ ಸಂರಕ್ಷಣಾವಿಧಾನ ಘಾಸಿಗೊಳ್ಳುತ್ತಿರುವುದನ್ನ, ಸಂಕುಚಿತಗೊಳ್ಳುತಿರುವ ದೇವರಕಾಡುಗಳ ವಿಸ್ತೀರ್ಣ, ಭೂಒತ್ತುವರಿ, ನಿರ್ವಹಣೆಯಲ್ಲಿ ಆಗುತ್ತಿರುವ ನಿರ್ಲಕ್ಷ್ಯಗಳು ಪ್ರತಿಬಿಂಬಿಸುತ್ತಿವೆ. ಇದೇ ವೇಗದಲ್ಲಿ ದೇವರಕಾಡುಗಳ ಅವನತಿ ಮುಂದುವರಿದರೆ ಜೀವವೈವಿಧ್ಯದ ಖಜಾನೆಗಳಾದ ಮತ್ತು ಜೀವಪರಿಸರ ವ್ಯವಸ್ಥೆಯ ಸಮತೋಲನಕ್ಕೆ ಕಾರಣವಾಗಿರುವ ಇವುಗಳನ್ನು ಇನ್ನು ಕೆಲವೇ ವರ್ಷಗಳಲ್ಲಿ ಕಳೆದುಕೊಳ್ಳುವ ಅಪಾಯವಿದೆ.

ಈ ಕಾರ್ಯಾಗಾರದಲ್ಲಿ ದೇವರಕಾಡುಗಳ ನಿರ್ವಹಣೆ ಮತ್ತು ಸಂರಕ್ಷಣೆಗೆ ಸಂಭಂದಿಸಿದ ಕೆಲವು ಮುಖ್ಯವಿಷಯಗಳನ್ನನಿಮ್ಮೆಲ್ಲರ ಜೊತೆಗೆ ಚರ್ಚಿಸಲಾಗುತ್ತದೆ. ಚರ್ಚಿಸಲಾಗುವ ಮಹತ್ವದ ವಿಷಯಗಳು

- ದೇವರಕಾಡುಗಳ ವಿವರಣ ಪಟ್ಟಿ ಮತ್ತು ದಾಖಲಾತಿ
- ಜೀವವೈವಿಧ್ಯ ಮತ್ತು ಜೀವಪರಿಸರ ವ್ಯವಸ್ಥೆಯ ಮೌಲ್ಯಮಾಪನ
- ದೇವರಕಾಡುಗಳ ನಿರ್ವಹಣೆಯಲ್ಲಿ ಗ್ರಾಮೀಣ ಸಮುದಾಯ, ಅರಣ್ಯ ಇಲಾಖೆ ಮತ್ತು ಇತರರ ಪಾತ್ರ
- ದೇವರಕಾಡುಗಳಿಗಿರುವ ಅಪಾಯ ಮತ್ತು ಅವುಗಳ ಸಂರಕ್ಷಣೆ

ದೇವರಕಾಡುಗಳ ಸಂರಕ್ಷಣೆ ಮತ್ತು ನಿರ್ವಹಣೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು, ಸ್ಥಳೀಯಮಟ್ಟದಲ್ಲಿ ದೇವರಕಾಡುಗಳನ್ನು ಹೇಗೆ ರಕ್ಷಿಸಬೇಕೆಂದು ಕಾರ್ಯತಂತ್ರ ಹೆಣೆಯಲು, ಜನರಲ್ಲಿ ದೇವರಕಾಡುಗಳ ಬಗ್ಗೆ ಜಾಗ್ರತಿ ಮೂಡಿಸಲು ಮತ್ತು ಜನರ ಜೀವನದಲ್ಲಿ ಇವುಗಳ ಮಹತ್ವ ತಿಳಿಯಲು ಈ ಕಾರ್ಯಗಾರದಿಂದ ಸಹಾಯವಾಗಲಿದೆಯೆಂದುಕೊಂಡಿದ್ದೇವೆ.
ಈ ಕಾರ್ಯಗಾರಕ್ಕೆ ಬಂದು ಭಾಗವಹಿಸಿ ದೇವರಕಾಡುಗಳ ಬಗ್ಗೆ ನಿಮಗೆ ಗೊತ್ತಿರುವ ಮಾಹಿತಿಯನ್ನು ಮತ್ತು ನಿಮ್ಮಲ್ಲಿರುವ ಜ್ಞಾನವನ್ನು ಹಂಚಿಕೊಳ್ಳಬೇಕಾಗಿ ಈ ಮೂಲಕ ವಿನಂತಿಸುತ್ತೇನೆ.


ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :

Dr. T.V. Ramachandra
Ph: 080 22933099
(cestvr@ces.iisc.ernet.in)

Dr. Rajasri Ray
Ph: 080 22932786 (Ext:109)
(rajasri@ces.iisc.ernet.in)

Dr. M.D. Subashchandran
Ph: 08386 223426
(mds@ces.iisc.ernet.in)

Centre for Ecological Sciences,Indian Institute of Science, Bangalore – 560 012